# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ -145ರ ವಾರ್ಡ್ ಸಭೆಯ ನಡವಳಿ

ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಬೊಂಬೇಗೌಡನಗರ ವಾರ್ಡ್-145 ರಲ್ಲಿ ವಾರ್ಡ್ ಸಭೆಯನ್ನು ಮಾನ್ಯ ಶ್ರೀಮತಿ. ಲಕ್ಷ್ಮೀದೇವಿ ಆರ್. ಉಪ ಆಯುಕ್ತರು ಕಂದಾಯ (ದಕ್ಷಿಣ), ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಯವರ ಅಪ್ಪಣೆ ಮೇರೆಗೆ ದಿನಾಂಕ:24/11/2021ರ ಬುದವಾರದಂದು ಮಧ್ಯಾಹ್ನ 3.00 ಗಂಟೆಗೆ ವಾರ್ಡ್ ಕಮಿಟಿ ಸಭೆಯನ್ನು ಕರೆಯಲಾಗಿದ್ದು, ವಾರ್ಡ್ ವ್ಯಾಪ್ತಿಯಲ್ಲಿನ ಕುಂದು ಕೊರತೆಗಳ ಬಗ್ಗೆ ಚರ್ಚಿಸಲು ಸದಸ್ಯರಿಗೆ ಆಹ್ವಾನ ನೀಡಿದ್ದು, ಸಭೆಗೆ ಹಾಜರಾಗಿರುವ ಎಲ್ಲರಿಗೂ ಸ್ವಾಗತ ಕೋರುತ್ತಾ, ವಾರ್ಡ್ ಸಮಿತಿ ಸಭೆಯ ಅಧ್ಯಕ್ಷರಾದ ಸನ್ಮಾನ್ಯ ಶ್ರೀಮತಿ. ಲಕ್ಷ್ಮೀದೇವಿ ರವರ ಅಧ್ಯಕ್ಷತೆಯೊಂದಿಗೆ ಸಭೆಯನ್ನು ನಡೆಸಲಾಯಿತು.

ಹಾಜರಿದ್ದವರು:-

1. ಉಪ ಆಯುಕ್ತರು (ದಕ್ಷಿಣ) ಹಾಗೂ ವಾರ್ಡ್ 145ರ ನೋಡಲ್ ಅಧಿಕಾರಿ.
2. ಸಹಾಯಕ ಅಭಿಯಂತರರು ವಾರ್ಡ್-145
3. ಸಹಾಯಕ ಇಂಜಿನಿಯರ್ (ಬೆಸ್ಕಾಂ)
4. ಸಹಾಯಕ ಇಂಜಿನಿಯರ್ (BWSSB)
5. ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್-145.
6. ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್-145.
7. ವಿಲ್ಸನ್‌ಗಾರ್ಡನ್ ಪೊಲೀಸ್ ಠಾಣೆ ಕಾನೂನು ಸುವ್ಯವಸ್ಥೆ ವಾರ್ಡ್ 145.
8. ನಾಗರೀಕ ಕಲ್ಯಾಣ ಸಂಘದ ಸದಸ್ಯರು ಮತ್ತು ಸಾರ್ವಜನಿಕರು.

ಸಭೆಗೆ ಗೈರು ಹಾಜರಾದ ಇಲಾಖೆಗಳು:-

1. ತೋಟಗಾರಿಕೆ ಇಲಾಖೆ, ಬಿಬಿಎಂಪಿ ಅಧಿಕಾರಿಗಳು ವಾರ್ಡ್ 145.
2. ಪೊಲೀಸ್ ಇಲಾಖೆ ಅಧಿಕಾರಿಗಳು (ಕಾನೂನು ಸುವ್ಯವಸ್ಥೆ) ಆಡುಗೋಡಿ.
3. ಕಿರಿಯ ಇಂಜಿನಿಯರ್ (ವಿದ್ಯುತ್ ವಿಭಾಗ ಬಿಬಿಎಂಪಿ)
4. ವಿಲ್ಸನ್‌ಗಾರ್ಡನ್ ಪೊಲೀಸ್ ಠಾಣೆ ಸಂಚಾರ ವಾರ್ಡ್ 145.

*********

1. ವಿಲ್ಸನ್‌ಗಾರ್ಡನ್ ವ್ಯಾಪ್ತಿಯಲ್ಲಿ ಅನೇಕ ಹೂವಿನ ಅಂಗಡಿಗಳು ಇರುತ್ತವೆ. ಸದರಿ ಅಂಗಡಿಗಳಲ್ಲಿ ರಾತ್ರಿ 10.00 ಗಂಟೆಯಿಂದ ಬೆಳಗಿನವರೆವಿಗೂ ಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದು, ರಾತ್ರಿ ವೇಳೆಯಲ್ಲಿ ಪಾನಮತ್ತರಾಗಿ ಗಲಾಟೆ ಮಾಡುತ್ತಿರುವುದರಿಂದ ಸ್ಥಳೀಯ ನಿವಾಸಿಗಳಿಗೆ ತೊಂದೆಯಾಗುತ್ತಿದೆ ಎಂದು ಸ್ಥಳೀಯರು ಸಭೆಯಲ್ಲಿ ದೂರಿದರು - ಸಂಬಂಧಿಸಿದ ವಿಷಯದ ಬಗ್ಗೆ ಕ್ರಮಕ್ಕಾಗಿ ಪೊಲೀಸ್ ಇಲಾಖೆಯನ್ನು ಕೋರಲಾಗುವುದು ಎಂದು ಅಧ್ಯಕ್ಷರು ಸಭೆಗೆ ತಿಳಿಸಿದರು.



Scanned with CamScanner

2. ಹೂವಿನ ಅಂಗಡಿಗಳನ್ನು ವಿಲ್ಸನ್‌ಗಾರ್ಡನ್ ಏರಿಯಾದಿಂದ ತೆರವುಗೊಳಿಸುವ ಬಗ್ಗೆ ಕ್ರಮಕ್ಕಾಗಿ ಕೋರಿದರು. ಸದರಿ ವಿಷಯವು ಈಗ ನ್ಯಾಯಾಲಯದಲ್ಲಿ ಇರುವುದರಿಂದ ನ್ಯಾಯಾಲಯದ ತೀರ್ಪಿನಂತೆ ಕ್ರಮ ಕೈಗೊಳ್ಳಲಾಗುವುದು ಎಂದು ಅಧ್ಯಕ್ಷರು ಸಭೆಗೆ ತಿಳಿಸಿದರು.

3. ಶ್ರೀ. ಬೂಪಯ್ಯ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಸರಿಯಾಗಿ ಕಸ ಗುಡಿಸುತ್ತಿಲ್ಲ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. ಕಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ ವಾರ್ಡಿನ ಎಲ್ಲಾ ಪ್ರದೇಶದಲ್ಲೂ ಸ್ವಚ್ಛತೆಯನ್ನು ಪ್ರತಿನಿತ್ಯ ನಿರ್ವಹಿಸಲಾಗುತ್ತಿದೆ. ಆದರೆ ಶ್ರೀ. ಬೂಪಯ್ಯ ರವರು ಅವರ ಮನೆಯ ಮುಂದಿನ ಬಿ.ಟಿ.ಎಸ್ ರಸ್ತೆಯಲ್ಲಿ ಸ್ವಚ್ಛತೆ ಮಾಡುವ ಪೌರಕಾರ್ಮಿಕಿಯರಿಗೆ ಅವಾಚ್ಯ ಶಬ್ಧಗಳಿಂದ ವಿನಾಕಾರಣ ನಿಂದಿಸುತ್ತಾರೆ ಎಂದು ಸಭೆಗೆ ತಿಳಿಸಿದರು

4. ವಿಲ್ಸನ್‌ಗಾರ್ಡನ್ 15ನೇ ಅಡ್ಡರಸ್ತೆಯಿಂದ 16ನೇ ಅಡ್ಡರಸ್ತೆಯವರೆಗೆ ಬೆಳಗಿನ ವೇಳೆ 20 ಲಗೇಜ್ ವಾಹನಗಳನ್ನು ನಿಲ್ಲಿಸಿರುವುದರಿಂದ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗಿದ್ದು, ಅನುಪಯುಕ್ತ ವಸ್ತುಗಳನ್ನು ಪಾದಚಾರಿ ಮಾರ್ಗದಲ್ಲಿ ಹಾಕಿರುತ್ತಾರೆ ಎಂದು ಸಭೆಯಲ್ಲಿ ತಿಳಿಸಿದರು – ಸಂಬಂಧಿಸಿದಂತೆ ಆಡುಗೋಡಿ ಸಂಚಾರಿ ಪೊಲೀಸ್ ಠಾಣೆಗೆ ಕ್ರಮಕ್ಕಾಗಿ ಪತ್ರ ಬರೆಯಲಾಗುವುದು ಎಂದು ಅಧ್ಯಕ್ಷರು ಸಭೆಗೆ ತಿಳಿಸಿದರು.

5. ವಿಲ್ಸನ್‌ಗಾರ್ಡನ್ 9ನೇ ಅಡ್ಡರಸ್ತೆ ನಿವಾಸಿಗಳು ರಸ್ತೆಯಲ್ಲಿ ಕಟ್ಟಡದ ಅವಶೇಷಗಳು ಹಾಗೂ ಸಿಲ್ಟ್ ತುಂಬಿದ್ದು, ಓಡಾಡಲು ಕಷ್ಟಕರವಾಗಿರುತ್ತದೆಂದು ಹಾಗೂ ಆನೆ ಪಾರ್ಕ್‌ನಲ್ಲಿನ ಬಿದಿರು ಬೆಳೆದು ಬೀದಿ ದೀಪಗಳ ಬೆಳಕು ಬಾರದಂತೆ ಬಾಗಿರುವ ಭಾಗಗಳನ್ನು ಕತ್ತರಿಸಲು, ಹಾಗೂ ಬೀದಿ ದೀಪಗಳನ್ನು ದುರಸ್ಥಿಪಡಿಸಲು ಕೋರಿದರು.

6. ವಿಲ್ಸನ್‌ಗಾರ್ಡನ್ 10ನೇ ಅಡ್ಡರಸ್ತೆಯ ಭನ್‌ವಾರ್ ಅಪಾರ್ಟ್‌ಮೆಂಟ್‌ನಲ್ಲಿ ಕೋತಿಗಳು ತಮ್ಮ ನಿವಾಸದ ಕಾಂಪೌಂಡ್ ಜಿಗಿದು ಮನೆಯೊಳಗೆ ಪ್ರವೇಶಿಸಿ ಮಕ್ಕಳು ಮತ್ತು ಮನೆಯವರನ್ನು ಭಯಪಡಿಸಿ ಮನೆಯೊಳಗಿನ ವಸ್ತುಗಳನ್ನು ನಾಶ ಪಡಿಸಿರುವುದರಿಂದ ಕೋತಿಗಳನ್ನು ಹಿಡಿದು ಕಾಡಿಗೆ ಬಿಡಲು ಕ್ರಮ ಕೈಗೊಳ್ಳಲು ಸಭೆಯಲ್ಲಿ ಕೋರಿದರು. ಹಾಗೂ ಸಂಬಂಧಿಸಿದಂತೆ ದೂರನ್ನು ನೀಡಿರುತ್ತಾರೆ.



Scanned with CamScanner

ಮೇಲಿನ ಈ ಎಲ್ಲಾ ಚಟುವಟಿಕೆಗಳನ್ನು ಕ್ರಮಬದ್ಧವಾಗಿ ಸಂಬಂಧಪಟ್ಟ ಇಲಾಖಾವಾರು ಸಮನ್ವಯ ಸಾಧಿಸಿಕೊಂಡು ನಿರ್ವಹಿಸಲು ಎಲ್ಲಾ ಸಿಬ್ಬಂಧಿ ವರ್ಗದವರು ಒಂದುಗೂಡಿ ಈ ಕಾರ್ಯದಲ್ಲಿ ಪಾಲ್ಗೊಂಡು ಮಾನ್ಯ ಆಯುಕ್ತರು (ಬಿಬಿಎಂಪಿ) ರವರು ವಹಿಸಿರುವ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಲು ಎಲ್ಲರೂ ಸಹಕರಿಸಬೇಕೆಂದು ಹೇಳುತ್ತಾ ಸಭೆ ಮುಕ್ತಾಯಗೊಳಿಸಿದರು.

ಕಾರ್ಯದರ್ಶಿ & ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ – 145
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧ್ಯಕ್ಷರು & ನೋಡಲ್ ಅಧಿಕಾರಿ.
ವಾರ್ಡ್ ಸಂಖ್ಯೆ – 145
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ



Scanned with CamScanner